**ಓ.ಎಸ್. ನಂಃ 140/2020**

**ಪಿ.ಡಬ್ಲ್ಯೂಃ 1**

**ದಿನಾಂಕ 03.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಪಿ.ಡಿ. ವಕೀಲರಿಂದಃ</u>**

16. ಅಸಲು ದಾವೆ ಸಂಖ್ಯೆ 257/2020 ರ ವಾದಿಯಾದ ತಿಮ್ಮೇಗೌಡ ನನ್ನ ಚಿಕ್ಕಪ್ಪನ ಮಗ. ತಮಗೂ ಸಹ ಈ ದಾವೆಯ ಆಸ್ತಿಯ ಅರ್ಧ ಭಾಗ ಆಸ್ತಿ ಕೊಡಬೇಕು ಎಂದು ಹೇಳಿ ಸದರಿ ತಿಮ್ಮೇಗೌಡರು ಕೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ತಂದೆ ಮತ್ತು ಸದರಿ ತಿಮ್ಮೇಗೌಡರ ತಂದೆಯ ಜಂಟಿ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ನಾನು ಮೋಸದಿಂದ ದಾವಾ ಆಸ್ತಿಯನ್ನು ಕೇವಲ ನನ್ನ ಒಬ್ಬನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ ಎಂದು ಸದರಿ ತಿಮ್ಮೇಗೌಡರು ಅಸಲು ದಾವೆ ಸಂಖ್ಯೆ 257/2020 ರ ದಾವೆಯಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಇಂದಿಗೂ ಸಹ ನಾನು ಮತ್ತು ಸದರಿ ತಿಮ್ಮೇಗೌಡರು ದಾವಾ ಆಸ್ತಿಯ ಜಂಟಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ.

17. ನಿಪಿ.17 ರಲ್ಲಿ ನಮೂದಿಸಿರುವ ದಾವಾ ಆಸ್ತಿಯ ಚೆಕ್ಕುಬಂಧಿಗೂ ಮತ್ತು ಈ ದಾವೆಯ ವಾದ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿಗೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ಮತ್ತು ಸದರಿ ತಿಮ್ಮೇಗೌಡರ ಜಂಟಿ ಸ್ವಾಧೀನದಲ್ಲಿದ್ದರು ಸಹ ನಾನು ಕೇವಲ ಪಹಣಿಗಳ ಆಧಾರದ ಮೇಲೆ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**